# ಎನ್‌ಐಟಿಕೆ: ತಾಂತ್ರಿಕ ಮೇಳ 2ಕೆ22

ಸುರತ್ಕಲ್, ಸೆ. 23: ಇಲ್ಲಿನ ಎನ್‌ಐಟಿಕೆಯಲ್ಲಿ ಮೂರು ದಿನಗಳ ಎಂಜಿನಿಯರಿಂಗ್ ಮೇಳ 2ಕೆ22ಕ್ಕೆ ಗುರುವಾರ ಚಾಲನೆ ನೀಡಲಾಯಿತು.

ನವಮಂಗಳೂರು ಬಂದರು ಪ್ರಾಧಿಕಾರದ ಅಧ್ಯಕ್ಷ ಡಾ| ವೆಂಕಟ ರಮಣ ಅಕ್ಕರಾಜು ಕಾರ್ಯಕ್ರಮ ಉದ್ಘಾಟಿಸಿ, ಭಾರತ ತಾಂತ್ರಿಕವಾಗಿ ಬಲಿಷ್ಠಗೊಳ್ಳುತ್ತಿದೆ. ಭವಿಷ್ಯದಲ್ಲಿ ನಮ್ಮ ದೇಶಕ್ಕೆ ಎಂಜಿನಿಯರ್‌ಗಳು ಪ್ರಧಾನ ಕೊಡುಗೆ ನೀಡುವಲ್ಲಿ ಮುಂಚೂಣಿಯಲ್ಲಿರುವರು ಎಂದರು.

ಎನ್‌ಐಟಿಕೆ ಪ್ರಭಾರ ನಿರ್ದೇಶಕ ಪ್ರೊ| ಜಿ.ಸಿ. ಮೋಹನ್ ಕುಮಾರ್, ವಿದ್ಯಾರ್ಥಿ ಡೀನ್ ಡಾ| ನರೇಂದ್ರನಾಥ್ ಎಸ್., ರಿಜಿಸ್ಟ್ರಾರ್ ರವೀಂದ್ರ ನಾಥ್ ಉಪಸ್ಥಿತರಿದ್ದರು. ಎಂಜಿನಿಯರ್‌ಗಳ ಸಹಿತ 8 ಸಾವಿರಕ್ಕೂ ಮಿಕ್ಕಿ ಜನ ಭಾಗವಹಿಸಲಿದ್ದು, ಇವಿ, ಡ್ರೋನ್, ಸ್ಟಾರ್ಟ್‌ಅಪ್ ಉದ್ಯಮ ಮತ್ತಿತರ ಪ್ರದರ್ಶನಗಳು ಹಾಗೂ ಗೇಮಿಂಗ್, ಮೈನಿಂಗ್, ಮಾರ್ಕೆಟಿಂಗ್, ಆಟೋಮೊಬೈಲ್ಸ್, ಸಿವಿಲ್, ಕೆಮಿಕಲ್ ಮತ್ತಿತರ ವೈವಿಧ್ಯಮಯ ಕ್ಷೇತ್ರದಲ್ಲಿ ಸ್ಪರ್ಧೆ ಆಯೋಜಿಸಲಾಗಿದೆ.

Udayavani, Date: 24/09/22, P. No, 10